**ಕರ್ನಾಟಕ ಸರ್ಕಾರ**

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017–18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು–01
ದಿನಾಂಕ: 25–10–2018.

**ಸುತ್ತೋಲೆ**

**ವಿಷಯ:** ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ ಹಾಗೂ ಇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ರಕ್ಷಣೆಯ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** ರಾಜ್ಯ ಎನ್.ಎಸ್.ಎಸ್ ಅಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/2018–19/270 ದಿನಾಂಕ: 17–10–2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಮತ್ತು ಇತರ ಚಟುವಟಿಕೆಗಳಲ್ಲಿ ಎನ್.ಎಸ್.ಎಸ್ ಸ್ವಯಂ ಸೇವಕ/ಸೇವಕಿಯರ ರಕ್ಷಣೆಯ ಕುರಿತಾಗಿ ಈ ಕೆಳಗಿನ ಸಲಹೆಗಳನ್ನು ಪಾಲಿಸಲು ಸೂಚಿಸಲಾಗಿದೆ.

1) ಕೆರೆ–ಸರೋವರ, ಸಮುದ್ರ, ಅಣೆಕಟ್ಟುಗಳ ಪಕ್ಕದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳನ್ನು ನಡೆಸದಿರುವುದು ಹಾಗೂ ಈ ಸ್ಥಳಗಳಲ್ಲಿ ಟ್ರೆಕಿಂಗ್ ಇತ್ಯಾದಿಗಳನ್ನು ಕೈಗೊಳ್ಳದಿರುವುದು.
2) ವಿಶೇಷ ವಾರ್ಷಿಕ ಶಿಬಿರಗಳ ಸಂದರ್ಭದಲ್ಲಿ ವಾಹನ ಸೌಲಭ್ಯಗಳನ್ನು ಹೊಂದಿರುವುದು.
3) ಕಾರ್ಯಕ್ರಮಗಳ ಕುರಿತಾಗಿ ಸ್ಥಳೀಯ ಪೋಲೀಸ್ ಠಾಣೆಗೆ ಲಿಖಿತ ಮಾಹಿತಿ ನೀಡುವುದು.
4) ಆಸ್ಪತ್ರೆ, ಪೋಲೀಸ್ ಠಾಣೆ, ಅಗ್ನಿಶಾಮಕ ದಳ ಮತ್ತು ಸಂಘಟನೆಗೆ ಸಹಾಯ ಮಾಡುವ ವ್ಯಕ್ತಿಗಳ ದೂರವಾಣಿ ಸಂಖ್ಯೆಗಳನ್ನು ಬರೆದಿಟ್ಟುಕೊಳ್ಳುವುದು ಮತ್ತು ಪ್ರಕಟಿಸುವುದು.
5) ಅಪಾಯಕಾರಿ ಪ್ರದೇಶಗಳಲ್ಲಿ ಛಾಯಾಚಿತ್ರಗಳನ್ನು ತೆಗೆದುಕೊಳ್ಳದಂತೆ ಕಟ್ಟುನಿಟ್ಟಾಗಿ ಸೂಚಿಸುವುದು.
6) ಶಿಬಿರಗಳು ಮತ್ತು ಹೊರ ಕಾರ್ಯಕ್ರಮಗಳಲ್ಲಿ ಭಾಗವಸುವ ಸ್ವಯಂ ಸೇವಕ /ಸೇವಕಿಯರ ಪಾಲಕರಿಗೆ ಮಾಹಿತಿ ನೀಡಿ ಲಿಖಿತ ಒಪ್ಪಿಗೆ ಪಡೆಯುವುದು.
7) ಭಾವೈಕ್ಯತಾ ಶಿಬಿರ, ಯುವಜನೋತ್ಸವ, ಸಾಹಸ ಶಿಬಿರ, ಇತ್ಯಾದಿಗಳಲ್ಲಿ ಭಾಗವಹಿಸುವಾಗ ಇಂಡಮಿನೆಂಟ್‌ಬಾಂಡ್‌ನ್ನು ಕಡ್ಡಾಯವಾಗಿ ಬರೆಸಿಕೊಳ್ಳುವುದು.
8) ದೈಹಿಕ ಅನಾರೋಗ್ಯವಿರುವ ಸ್ವಯಂ ಸೇವಕ /ಸೇವಕಿಯರ ಕಡ್ಡಾಯವಾಗಿ ಶಿಬಿರಗಳಲ್ಲಿ ಭಾಗವಹಿಸದಂತೆ ಸೂಚಿಸುವುದು.
9) ಶಿಬಿರಗಳಲ್ಲಿ ಕಡ್ಡಾಯವಾಗಿ ಮಹಿಳಾ ಅಧ್ಯಾಪಕರನ್ನು ನಿಯೋಜಿಸುವುದು.
10) ಶಿಬಿರದ ಕಾರ್ಯಕ್ರಮಗಳು ನಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೊಬೈಗಳನ್ನು ನಿಷೇದಿಸುವುದು.
11) ಸ್ವಯಂ ಸೇವಕ /ಸೇವಕಿಯರಿಗೆ ಶಿಬಿರಕ್ಕೆ ಸಂಬಂಧಿಸಿದ ನಿಯಮಗಳನ್ನು ಸಭೆ ಕರೆದು ಸ್ಪಷ್ಟವಾಗಿ ವಿವರಿಸಿ ಲಿಖಿತವಾಗಿ ನೀಡಿ ಸಹಿ ಪಡೆಯುವುದು.

ನಿರ್ದೇಶಕರು

ಪ್ರತಿ:–

1) ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ –ಸೂಕ್ತ ಕ್ರಮಕ್ಕಾಗಿ
2) ನಿರ್ದೇಶಕರು, ಭಾರತ ಸರ್ಕಾರ ಪ್ರಾತೀಯ ಕೇಂದ್ರ, ಬಸವನಗುಡಿ, ಬೆಂಗಳೂರು
3) ಇ–ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
4) ಕಛೇರಿ ಪ್ರತಿ